# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 03/2020**

ಸಿಡಬ್ಲ್ಯೂ: 01
ಪಿಡಬ್ಲ್ಯೂ: 01

**ದಿನಾಂಕಃ 19-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ಆರ್.ವಿ. ಚೌಧರಿ

ತಂದೆಯ ಹೆಸರು : ರಾಮರೆಡ್ಡಿ

ವಯಸ್ಸು : 3 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬೆಂಗಳೂರು

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿ ಗೊತ್ತು. ನಮ್ಮ ತಂದೆಗೆ ಸೇರಿದ ಜಮೀನು ಸರ್ವೆ ನಂ.**90,** ಟಿ. ಮಹಾದೇವಪುರದಲ್ಲಿತ್ತು. ಅದರ ಬಗ್ಗೆ ಆಕಾರ್ ಬಂದ್ ಬೇಕಾಗಿತ್ತು. ನಾವು ಚಳ್ಳಕೆರೆ ಸರ್ವೆ ಕಛೇರಿಗೆ ಅರ್ಜಿ ಕೊಟ್ಟೆವು. ನಾವು ಅರ್ಜಿ ಕೊಟ್ಟು **10–15** ದಿನ ಕಛೇರಿಗೆ ಓಡಾಡಿದೆವು. ದಾಖಲೆ ಶಿಥಿಲವಾಗಿದೆ, ಕೊಡಲು ಬರುವುದಿಲ್ಲ ಎಂದು ಹೇಳಿದರು. ಈ ಬಗ್ಗೆ ಹಿಂಬರಹವನ್ನು ಸಹ ಕೊಟ್ಟರು. ನಾವು ಏನು ಮಾಡಬೇಕು ಎಂದು ಕೇಳಿದ್ದಕ್ಕೆ ಗ್ರಾಮ ಲೆಕ್ಕಿಗರ ಬಳಿ ಹೋಗುವಂತೆ ಆರೋಪಿ ಹೇಳಿದರು. ನಾವು ಗ್ರಾಮ ಸಹಾಯಕರಿಗೆ ಹೋಗಿ ಕೇಳಿದೆವು. ನಂತರ ಅವರೇ ಆಕಾರ್ ಬಂದ್ ಪುಸ್ತಕವನ್ನು ತಂದು ಕೊಟ್ಟರು. ಆಗ ಆರೋಪಿ ದೃಢೀಕೃತ ಪ್ರತಿಯನ್ನು ಕೊಡಬೇಕು ಎಂದು ಹೇಳಿದರು. ಆಗ ಗ್ರಾಮ ಲೆಕ್ಕಿಗರು ನಮಗೆ ಆ ರೀತಿ ದೃಢೀಕೃತ ಪ್ರತಿ ಕೊಡಲು ಬರುವುದಿಲ್ಲ ಎಂದು ಹೇಳಿದರು. ಆಗ ಆರೋಪಿ ರೂ.**500/–** ದಾಖಲೆ ಕೊಡೋಣ ಎಂದು ಹೇಳಿದರು. ಆಗ ನಾನು ನನ್ನ ಬಳಿ ಹಣ ಇಲ್ಲ ನಂತರ ಬಂದು ಕೊಡುತ್ತೇನೆಂದು ಹೇಳಿದೆನು. ಎಸಿಬಿ ಕಛೇರಿಯ ನಂಬರ್ ಹೊರಗಡೆ ಇತ್ತು. ಆಗ ನಾನು ಆ ನಂಬರಿಗೆ ಫೋನ್ ಮಾಡಿದೆ. ಆಗ ರೆಕಾರ್ಡ್ ಮಾಡಿಕೊಂಡಿದ್ದಿರಾ ಎಂದು ಕೇಳಿದರು, ಆಗ ನಾನು ರೆಕಾರ್ಡ್ ಮಾಡಿಕೊಂಡಿದ್ದೇನೆಂದು ಹೇಳಿದೆ. ಆ ರೆಕಾರ್ಡ್ ತರುವಂತೆ ಹೇಳಿದರು, ಜೀಪನ್ನು ಕಳುಹಿಸಿದರು. ನಾನು ಹೇಳಿದಂತೆ ಕಛೇರಿಯಲ್ಲಿ ಟೈಪ್ ಮಾಡಿದರು. ದಿನಾಂಕಃ **14–02–2019** ರಂದು ಈ ಘಟನೆ ನಡೆದಿತ್ತು. ಸದರಿ ದೂರಿನ್ನು ನಿಪಿ–

**1** ಎಂದು ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ನಾನು ಹೇಳಿದಂತೆ ಟೈಪ್ ಮಾಡಿದ್ದಾರೆ.

**2.** ಬೇರೆ ಕಛೇರಿಯಿಂದ ಇಬ್ಬರನ್ನು ಕರೆಸಿದ್ದರು. ನನ್ನ ಬಳಿ ರೂ.**500/–** ನೋಟನ್ನು ತೆಗೆದುಕೊಂಡರು. ಎರಡು ಬಾಟಲ್ ಗಳನ್ನು ತೋರಿಸಿದರು, ಒಂದು ನೋಟಿಗೆ ಕೆಮಿಕಲ್ ಹಾಕಿದರು. ಬೇರೆ ಇಲಾಖೆಯಿಂದ ಬಂದಿದ್ದ ಇಬ್ಬರಿಗೆ ಈ ವಿಷಯವನ್ನು ಹೇಳಿದರು, ಆ ಪೈಕಿ ಒಬ್ಬರು ಆ ಹಣವನ್ನು ನನ್ನ ಜೇಬಿನಲ್ಲಿಟ್ಟರು. ಕೆಮಿಕಲ್ ನ್ನು ಬಾಟಲಿಗೆ ಹಾಕಿ ಸೀಲು ಮಾಡಿದರು. ಅಲ್ಲಿ ಬರವಣಿಗೆ ಮಾಡಿ ಸಹಿ ಪಡೆದುಕೊಂಡರು. ಆ ದಾಖಲೆಯನ್ನು ನಿಪಿ–**2** ಎಂದು ಗುರುತಿಸಲಾಯಿತು. ಅಲ್ಲಿ ನನ್ನಿಂದ ಮೊಬೈಲಿನ ಮೆಮೋರಿ ಚಿಪ್ ನ್ನು ತೆಗೆದುಕೊಂಡರು. ಆ ಧ್ವನಿಯನ್ನು ಗುರುತಿಸುವಂತೆ ಕೇಳಿದ್ದು ನಾನು ನನ್ನದೇ ಧ್ವನಿ ಎಂದು ಹೇಳಿದೆ. ಆ ಬಗ್ಗೆ ಪ್ರಿಂಟ್ ತೆಗೆದು ಸಹಿ ಪಡೆದುಕೊಂಡರು. ಸದರಿ ದಾಖಲೆಯನ್ನು ನಿಪಿ–**3** ಎಂದು ಗುರುತಿಸಲಾಯಿತು.

**3.** ನಂತರ ವಾಯ್ಸ್ ರೆಕಾರ್ಡರನ್ನು ಕೊಟ್ಟರು. ನ್ಯಾಯಾಲಯದ ಮುಂದೆ ಇರುವ ಸೀಲಾದ ಕವರಿನಲ್ಲಿರುವ ಮೆಮೋರಿ ಕಾರ್ಡನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು, ಸದರಿ ಮೆಮೋರಿ ಕಾರ್ಡನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು **1** ಎಂದು ಗುರುತಿಸಲಾಯಿತು. ಸದರಿ ಧ್ವನಿ ಸುಳಿಯನ್ನು ಡಿವಿಡಿ ಮಾಡಿದರು. ನ್ಯಾಯಾಲಯದ ಮುಂದೆ ಇರುವ ಸೀಲಾದ ಕವರಿನಲ್ಲಿರುವ ಡಿವಿಡಿಯನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು, ಸದರಿ ಡಿವಿಡಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು **2** ಎಂದು ಗುರುತಿಸಲಾಯಿತು. ಮುದ್ದೆ ಮಾಲು **2** ನ್ನು ಪ್ಲೇ ಮಾಡಿದಾಗ ಅದರಲ್ಲಿ ಯಾವುದೇ ಪೈಲ್ ಇರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಅದು ಖಾಲಿ ಡಿವಿಡಿಯಾಗಿರುತ್ತದೆ. ನೋಟಿನ ಮೇಲೆ ಹಚ್ಚಿ ಉಳಿದ ಪೌಡರನ್ನು ಸ್ಯಾಂಪಲ್ ತೆಗೆದುಕೊಂಡರು. ನ್ಯಾಯಾಲಯದ ಮುಂದೆ ಇರುವ ಸೀಲಾದ ಕವರಿನಲ್ಲಿರುವ ಪಿನಾಪ್ ದಲೀನ್ ಪೌಡರನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು, ಸದರಿ ಪೌಡರನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು **3** ಎಂದು ಗುರುತಿಸಲಾಯಿತು. ಒಂದು ಪೌಡರನ್ನು ಮಿಕ್ಸ್ ಮಾಡಿ ಅದರ ಸ್ಯಾಂಪಲ್ ನ್ನು ಬಾಟಲಿನಲ್ಲಿ ತೆಗೆದುಕೊಂಡರು. ಅದು ವಸ್ತು ಸಂ.**6** ಆಗಿದ್ದು ಅದನ್ನು ಮುದ್ದೆ ಮಾಲು **4**

ಎಂದು ಗುರುತಿಸಲಾಯಿತು. ನನ್ನ ಜೇಬಿನಲ್ಲಿ ಹಣ ಇಟ್ಟ ನಂತರ ಆ ಸಾಕ್ಷಿಯ ಕೈಯನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ಬಣ್ಣ ಬದಲಾವಣೆಯಾಯಿತು. ಅದನ್ನು ಸೀಲು ಮಾಡಿದ್ದು ಅದು ವಸ್ತು ಸಂ.7 ಆಗಿದ್ದು ಅದನ್ನು ಮುದ್ದೆ ಮಾಲು **5** ಎಂದು ಗುರುತಿಸಲಾಯಿತು.

**4.** ನಂತರ ಎಸಿಬಿ ಪೊಲೀಸರು ನೀವು ಆ ಸ್ಥಳಕ್ಕೆ ಹೋದ ನಂತರ ಹಣ ಕೊಟ್ಟ ಮೇಲೆ ತಲೆ ಮೇಲೆ ಕೈಯಾಡಿಸಿಕೊಂಡು ಸೂಚನೆ ಕೊಡಬೇಕೆಂದು ನನಗೆ ತಿಳಿಸಿದರು. ಮಹಜರ್ ಸಾಕ್ಷಿದಾರರು ಬರುತ್ತಾರೆಂದು ಹೇಳಿದರು. ಚಳ್ಳಕೆರೆಯ ಆರೋಪಿಯ ಕಛೇರಿಗೆ ನಾನು ಹೋದಾಗ ಅಲ್ಲಿ ಆರೋಪಿ ಇರಲಿಲ್ಲ. ನನ್ನ ಮೊಬೈಲಿನಿಂದ ಆರೋಪಿಗೆ ಕಾಲ್ ಮಾಡಿದೆ. ಆರೋಪಿ ತಾಲ್ಲೂಕು ಕಛೇರಿಯಲ್ಲಿದ್ದವರು ಹೊರಗೆ ಬಂದರು. ದುಡ್ಡನ್ನು ಕೊಡಿ ಎಂದು ಕೇಳಿದರು. ನಾನು ಅಲ್ಲಿಯೇ ಹಣವನ್ನು ಕೊಟ್ಟೆ. ಆ ಹಣವನ್ನು ಶರ್ಟಿನ ಜೇಬಿನಲ್ಲಿಟ್ಟುಕೊಂಡು ಒಳಗೆ ಹೋದರು. ನಂತರ ನಾನು ಎಸಿಬಿಯವರಿಗೆ ಸನ್ನೆ ಮಾಡಿದೆ. ಅವರು ಬಂದು ಆರೋಪಿಯನ್ನು ಹಿಡಿದುಕೊಂಡು ಹಣ ತೆಗೆಯುವಂತೆ ಹೇಳಿದರು. ಆಗ ಆರೋಪಿ ರೂ.**500/-**ರ ನಾನು ಕೊಟ್ಟಿದ್ದ ನೋಟನ್ನು ಮತ್ತು ಆತನ ಜೇಬಿನಲ್ಲಿದ್ದ ವಸ್ತುಗಳನ್ನು ಟೇಬಲ್ ಮೇಲೆ ಇಟ್ಟರು. ನಂತರ ಮಹಜರಿನಲ್ಲಿ ನೋಟ್ ನಂಬರನ್ನು ಬರೆದುಕೊಂಡಿದ್ದ ಪಂಚರು ಸದರಿ ನೋಟ್ ನಂಬರನ್ನು ನೋಡಿ ಖಚಿತಪಡಿಸಿಕೊಂಡರು. ಆ ನೋಟನ್ನು ತೆಗೆದುಕೊಂಡು ಸೀಲು ಮಾಡಿದರು. ಆ ನೋಟನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯ ಕೈಯನ್ನು ಕೆಮಿಕಲ್ ನೀರಿನಲ್ಲಿ ತೋಳೆಸಿದರು. ಅದು ಸ್ವಲ್ಪ ಬಣ್ಣ ಬದಲಾಯಿತು. ಸದರಿ ವಸ್ತು ಸಂ.**9** ನ್ನು ಗುರುತಿಸಿದ್ದು ಅದನ್ನು ಮುದ್ದೆ ಮಾಲು **6** ಎಂದು ಗುರುತಿಸಲಾಯಿತು. ಆರೋಪಿಯ ಶರ್ಟನ್ನು ತೆಗೆಸಿ ಆತನಿಗೆ ಬೇರೆ ಶರ್ಟನ್ನು ಕೊಡಿಸಿದರು. ಸದರಿ ಶರ್ಟನ್ನು ಕೆಮಿಕಲ್ ನೀರಿನಲ್ಲಿ ಅದ್ದಿದಾಗ ಅದರ ಬಣ್ಣ ಬದಲಾಯಿತು. ಸದರಿ ವಸ್ತು ಸಂ.**11** ನ್ನು ಗುರುತಿಸಿದ್ದು ಅದನ್ನು ಮುದ್ದೆ ಮಾಲು **7** ಎಂದು ಗುರುತಿಸಲಾಯಿತು. ಆ ಶರ್ಟನ್ನು ವಶಕ್ಕೆ ಪಡೆದುಕೊಂಡಿದ್ದು ಈಗ ನ್ಯಾಯಾಲಯದ ಮುಂದೆ ಇರುವ ಸೀಲಾದ ಕವರಿನಲ್ಲಿರುವ ಶರ್ಟನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು, ಸದರಿ ಶರ್ಟನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು **8** ಎಂದು ಗುರುತಿಸಲಾಯಿತು.

**5**. ಎ.ಡಿ.ಎಲ್.ಆರ್.ರವರು ತುಮಕೂರಿನಿಂದ ಬರುತ್ತಿದ್ದಾರೆಂದು ಮಾಹಿತಿ ಬಂದಿದ್ದು ಅವರಿಗಾಗಿ ಕಾಯ್ದೆವು. ಅವರು ಧ್ವನಿ ಸುರುಳಿಯನ್ನು ಕೇಳಿಸಿಕೊಂಡರು. ಅವರು ಆರೋಪಿಯ ಧ್ವನಿ ಎಂದು ಗುರುತಿಸಿದರು. ಟ್ರಾಪ್ ಮಹಜರನ್ನು ತಯಾರಿಸಿದ್ದು, ಮಹಜರಿಗೆ ಸಹಿ ಮಾಡಿದರು. ಸದರಿ ಮಹಜರನ್ನು ನಿಪಿ–**4** ಎಂದು ನನ್ನ ಸಹಿಯನ್ನು ನಿಪಿ–**4**(ಎ) ಎಂದು ಗುರುತಿಸಲಾಯಿತು. ಎ.ಡಿ.ಎಲ್.ಆರ್. ಮತ್ತು ಪಂಚರ ಸಹಿಗಳನ್ನು ಪಡೆದುಕೊಂಡರು. ನಂತರ ಚಿತ್ರದುರ್ಗದ ಕಛೇರಿಗೆ ಬಂದೆವು. ಮಾರನೇ ದಿನ ನನಗೆ ಬರುವಂತೆ ಹೇಳಿದರು.

**6**. ಮೊದಲೇ ಮಾದರಿ ಧ್ವನಿಯನ್ನು ತೆಗೆದಿದ್ದು ಅದನ್ನು ನಾನು ಓದಿದ ನಂತರ ರೆಕಾರ್ಡ್ ಮಾಡಿದರು. ಆಗ ಇಬ್ಬರು ಪಂಚರು ಬಂದಿದ್ದರು. ಅದನ್ನು ಡಿವಿಡಿ ಮಾಡಿದರು. ಸದರಿ ಧ್ವನಿಯನ್ನು ಡಿವಿಡಿ ಮಾಡಿದರು. ನ್ಯಾಯಾಲಯದ ಮುಂದೆ ಇರುವ ಸೀಲಾದ ಕವರಿನಲ್ಲಿರುವ ಡಿವಿಡಿಯನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು, ಸದರಿ ಡಿವಿಡಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು **9** ಎಂದು ಗುರುತಿಸಲಾಯಿತು. ಮುದ್ದೆ ಮಾಲು **9** ನ್ನು ಪ್ಲೇ ಮಾಡಿದಾಗ ಅದರಲ್ಲಿ ಯಾವುದೇ ಪೈಲ್ ಇರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಅದು ಖಾಲಿ ಡಿವಿಡಿಯಾಗಿರುತ್ತದೆ. ಆ ಬಗ್ಗೆ ಮಹಜರ್ ಮಾಡಿದ್ದು ಅದನ್ನು ನಿಪಿ–**5** ಎಂದು ನನ್ನ ಸಹಿಯನ್ನು ನಿಪಿ–**5**(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಬಿ.ಎಸ್. ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ನಾನು ದೇವರ ಹೆಸರಿನಲ್ಲಿ ದಿನಾಂಕ 12-12-2023 ರಂದು ಪ್ರಮಾಣ ವಚನ ಸ್ವೀಕರಿಸುತ್ತಿದ್ದೇನೆ.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

**7.** ದಿನಾಂಕ **14–02–2019** ರಂದು ಎ.ಸಿ.ಬಿ. ಕಛೇರಿಯಲ್ಲಿ ನಾನು ಹಾಜರುಪಡಿಸಿದ್ದ ಮತ್ತು ತಾಲ್ಲೂಕು ಕಛೇರಿಯ ಹೊರಗೆ ಆರೋಪಿತನಿಗೆ ನಾನು ಕೊಟ್ಟಿದ್ದ ಹಣವನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ **1** ಪೇಪರ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಪರ ವಕೀಲರ ಸಮಕ್ಷಮ ತೆರೆಯಲಾಯಿತು). ಸದರಿ ರೂ.**500/–** ನೋಟನ್ನು ಈಗ ನೋಡಿದೆ. ಅದನ್ನು ಮುದ್ದೆ ಮಾಲು **10** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**10**)

**(**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆ ದೂರು ಮತ್ತು ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸ್ವಲ್ಪ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ವಾದ ಕೇಳಿ ಅನುಮತಿ ಕೊಡಲಾಯಿತು**)**

**ಪಾಟೀ ಸವಾಲು: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

**8**. ಎಸಿಬಿ ಕಛೇರಿಗೆ ನಾನು ರೂ.**500/–** ನೋಟನ್ನು ತೆಗೆದುಕೊಂಡು ಹೋದ ನಂತರ ಅಲ್ಲಿ ಚಾಸಾ–**2** ಹುಸೇನ್ ಶರೀಫ್ ರವರು ಸದರಿ ನೋಟಿನ ಸಂಖ್ಯೆಯನ್ನು ಉಕ್ತಲೇಖನ ಕೊಟ್ಟರು ಹಾಗೂ ಅದನ್ನು ಚಾಸಾ–**3** ಒಂದು ಹಾಳೆಯಲ್ಲಿ ಬರೆದರು ಎಂದರೆ ನಿಜ. ನಾನು ಎಸಿಬಿ ಕಛೇರಿಗೆ ಹೋದಾಗ ಅವರು ಒಂದು ಡಬ್ಬಿಯಲ್ಲಿ ಇದ್ದ ಸೋಡಿಯಂ ಕಾರ್ಬೊನೇಟ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಒಂದು ಪ್ರತ್ಯೇಕವಾದ ಕಾಗದಕದಲ್ಲಿ ತೆಗೆದು ಅದನ್ನು ಮಡಚಿ ಪ್ಲಾಸ್ಟಿಕ್ ಖಾಲಿ ಕವರಿಗೆ ಹಾಕಿ ಖಾಕಿ ಬಣ್ಣದ ಕವರಿನಲ್ಲಿ ಇಟ್ಟು ಮೊಹರು ಮಾಡಿದರು ಎಂದರೆ ನಿಜ.

(ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ **1** ಪೇಪರ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಪರ ವಕೀಲರ ಸಮಕ್ಷಮ ತೆರೆಯಲಾಯಿತು).

ಈಗ ನನಗೆ ತೋರಿಸಿದ ಸೋಡಿಯಂ ಕಾರ್ಬೋನೆಟ್ ಇರುವ ಕವರ್ ಅದೇ. ಸಾಕ್ಷಿ

ಈ ಕವರನ್ನು ಗುರುತಿಸಿದ ಕಾರಣ ಇದನ್ನು ಮುದ್ದೆ ಮಾಲು **11** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**5**)

**9**. ಅದೇ ಪ್ರಕಾರ ಡಿಸ್ಟಿಲ್ ವಾಟರನ್ನೂ ಸಹ ಒಂದು ಗಾಜಿನ ಬಾಟಲಿಯಲ್ಲಿ ತೆಗೆದುಕೊಂಡು ಅದನ್ನೂ ಸಹ ಮೊಹರು ಮಾಡಿದರು ಎಂದರೆ ನಿಜ. ಈಗ ನನಗೆ ತೋರಿಸಿದ ಡಿಸ್ಟಿಲ್ ವಾಟರ್ ಬಾಟಲ್ ಅದೇ ಎಂದರೆ ನಿಜ. ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು ಮುದ್ದೆ ಮಾಲು **12** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**4**) ಈ ಎಲ್ಲಾ ವಹಿಸುವಿಕೆ ಪ್ರಕ್ರಿಯೆಯ ಪಂಚನಾಮೆ ಮಾಡುವಾಗ ಭಾವಚಿತ್ರಗಳನ್ನು ತೆಗೆದರು ಎಂದರೆ ನಿಜ. ಈಗ ನನಗೆ ತೋರಿಸಿದ **7** ಭಾವಚಿತ್ರಗಳು ಅವೇ ಎಂದರೆ ನಿಜ. ಸದರಿ ಭಾವಚಿತ್ರಗಳಿಗೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ **65** ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇವೆಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಹೇಳಿರುವ ಕಾರಣ ಮತ್ತು ಅದನ್ನು ಆರೋಪಿತನ ಪರ ವಕೀಲರು ಒಪ್ಪಿರುವ ಕಾರಣ ಸದರಿ ಭಾವಚಿತ್ರಗಳನ್ನು ನಿಪಿ–**6** ರಿಂದ **12** ಎಂದು ಗುರುತಿಸಲಾಯಿತು.

**10**. ಎಸಿಬಿ ಕಛೇರಿಯಿಂದ ಆರೋಪಿತನ ಕಛೇರಿಗೆ ಹೋಗುವ ಮೊದಲು ಎಸಿಬಿ ಅಧಿಕಾರಿಗಳು ನನಗೆ ಒಂದು ವಾಯ್ಸ್ ರೆಕಾರ್ಡರನ್ನು ಕೊಟ್ಟು ಆರೋಪಿತನೇನಾದರೂ ಲಂಚದ ಹಣದ ಬೇಡಿಕೆ ಇಟ್ಟರೆ ಅದನ್ನು ರೆಕಾರ್ಡ್ ಮಾಡಿಕೊಳ್ಳಬೇಕೆಂದು ನನಗೆ ಸೂಚಿಸಿದ್ದರು ಎಂದರೆ ನಿಜ. ಆರೋಪಿತ ನನ್ನಿಂದ ಹಣ ಪಡೆದ ನಂತರ ನಾನು ಎಸಿಬಿಯವರಿಗೆ ಸಂಜ್ಞೆ ಮಾಡಿದ ನಂತರ ಅವರು ತಾಲ್ಲೂಕು ಕಛೇರಿಯ ಒಳಗೆ ಬಂದಾಗ ಅಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು ಎಂದರೆ ನಿಜ. ಆ ಸಂದರ್ಭದಲ್ಲಿ ಮಾದರಿಗಾಗಿ ಸ್ವಲ್ಪ ದ್ರಾವಣವನ್ನು ಒಂದು ಬಾಟಲಿಗೆ ಹಾಕಿ ಅದನ್ನು ಮೊಹರು ಮಾಡಿದರು ಎಂದರೆ ನಿಜ. ಸದರಿ ಬಾಟಲಿ ಈಗ ನನಗೆ ತೋರಿಸಿದ ಬಾಟಲಿ ಎಂದರೆ ನಿಜ. ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು ಮುದ್ದೆ ಮಾಲು **13** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**8**)

**11.** ಆರೋಪಿತನ ಕಛೇರಿಯಲ್ಲಿ ವಾಯ್ಸ್ ರೆಕಾರ್ಡರಿನ ಮೂಲಕ ನಾನು ರೆಕಾರ್ಡ್ ಮಾಡಿಕೊಂಡಿದ್ದ ವಿಷಯವನ್ನು ಎ.ಸಿ.ಬಿ. ಕಛೇರಿಗೆ ಬಂದ ನಂತರ ಲ್ಯಾಪ್‌ಟಾಪಿಗೆ

ಡೌನ್‌ಲೋಡ್ ಮಾಡಿ ಅದನ್ನು ನಮಗೆ ಕೇಳಿಸಿದರು ಎಂದರೆ ನಿಜ. ಆಗ ಅದನ್ನು ಒಂದು ಡಿ.ವಿ.ಡಿ.ಗೆ ಡೌನ್‌ಲೋಡ್ ಮಾಡಿದರು ಎಂದರೆ ನಿಜ. ಸದರಿ ಸಿಡಿಯನ್ನು ಮೊಹರು ಮಾಡಿದರು ಎಂದರೆ ನಿಜ.

(ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ **1** ಪೇಪರ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಪರ ವಕೀಲರ ಸಮಕ್ಷಮ ತೆರೆಯಲಾಯಿತು).

(ಸದರಿ ಕವರಿನಲ್ಲಿದ್ದ ಡಿ.ವಿ.ಡಿ.ಯನ್ನು ಈಗ ಆರೋಪಿತ, ಆತನ ವಕೀಲರ ಸಮಕ್ಷಮ ಮಾನ್ಯ ಪಿಪಿರವರ ಕೋರಿಕೆಯ ಮೇರೆಗೆ ನ್ಯಾಯಾಲಯದಲ್ಲೆ ಪ್ಲೇ ಮಾಡಲಾಯಿತು. ಅದರಲ್ಲಿ **18.02** ನಿಮಿಷದ ಸಂಭಾಷಣೆ ಇದೆ.)

ಸದರಿ ಸಂಭಾಷಣೆ ಇರುವ ಡಿವಿಡಿಯನ್ನು ಮುದ್ದೆ ಮಾಲು **14** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**13**)

ಸದರಿ ಸಂಭಾಷಣೆಯನ್ನು ಬರವಣಿಗೆ ಮಾಡಿ ಅದರ ಪ್ರಿಂಟನ್ನು ಸಹ ತೆಗೆದರು ಎಂದರೆ ನಿಜ. ಸದರಿ ಲೇಖಿ ಪ್ರತಿಯನ್ನು ಈಗ ನೋಡಿದೆ ಅದನ್ನು ನಿಪಿ–**13** ಎಂದು ಗುರುತಿಸಲಾಯಿತು.

**12.** ಆರೋಪಿತನ ಬಳಿ ನನ್ನ ಅರ್ಜಿಗೆ ಸಂಬಂಧಿಸಿದ ಇದ್ದ ಕಡತದ ದೃಢೀಕೃತ ಪ್ರತಿಯನ್ನು ಚಾಸಾ–**4** ರವರಿಂದ ಮಾಡಿಸಿ ತನಿಖಾಧಿಕಾರಿ ಪಡೆದುಕೊಂಡರು ಎಂದರೆ ನಿಜ. ಸದರಿ ದಾಖಲೆ ಈಗ ನನಗೆ ತೋರಿಸಿದ ದೋಷಾರೋಪಣ ಪಟ್ಟಿಯೊಂದಿಗೆ ಲಗತ್ತಿಸಿರುವ ಪುಟ ಸಂಖ್ಯೆ **209** ರಿಂದ **215** ರಲ್ಲಿ ಇದೆ ಎಂದರೆ ನಿಜ. ಅದನ್ನು ಒಟ್ಟಾಗಿ ನಿಪಿ–**14** ಎಂದು ಗುರುತಿಸಲಾಯಿತು. ಈ ಟ್ರಾಪ್ ಪ್ರಕ್ರಿಯೆ ಸಂದರ್ಭದಲ್ಲಿ ಪಂಚನಾಮೆ ಮಾಡುವಾಗ ಛಾವಚಿತ್ರಗಳನ್ನು ತೆಗೆದರು ಎಂದರೆ ನಿಜ. ಈಗ ನನಗೆ ತೋರಿಸಿದ **7** ಛಾವಚಿತ್ರಗಳು ಅವೇ ಎಂದರೆ ನಿಜ. ಸದರಿ ಛಾವಚಿತ್ರಗಳಿಗೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ **65** ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇವೆಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಹೇಳಿರುವ ಕಾರಣ ಮತ್ತು ಅದನ್ನು ಆರೋಪಿತನ ಪರ ವಕೀಲರು ಒಪ್ಪಿರುವ ಕಾರಣ ಸದರಿ ಛಾವಚಿತ್ರಗಳನ್ನು ನಿಪಿ–**15** ರಿಂದ **21** ಎಂದು ಗುರುತಿಸಲಾಯಿತು.

**13**. ಆರೋಪಿತನ ಜೊತೆ ಸಂಭಾಷಣೆ ನಡೆಸಿದ ಕಾಲದಲ್ಲಿ ನನ್ನ ಧ್ವನಿಯಲ್ಲಿ ಇದ್ದ ಅಂಶಗಳನ್ನು ಪ್ರತ್ಯೇಕಿಸಿ ಅದರ ಲೇಖಿ ಪ್ರತಿಯನ್ನು ತೆಗೆದರು ಎಂದರೆ ನಿಜ. ಸದರಿ ಲೇಖಿ ಪ್ರತಿಯನ್ನು ನನಗೆ ಕೊಟ್ಟು ಎರಡು ಭಾರಿ ನನ್ನ ಬಳಿ ಅದರಲ್ಲಿರುವ ಅಂಶಗಳನ್ನು ಹೇಳಿಸಿದರು ಮತ್ತು ಅದನ್ನು ರೆಕಾರ್ಡ್ ಮಾಡಿದರು ಎಂದರೆ ನಿಜ. ಸದರಿ ಲೇಖಿ ಪ್ರತಿಯನ್ನು ಈಗ ನೋಡಿದೆ. ಅದನ್ನು ನಿಪಿ–**22** ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿಯೂ ಭಾವಚಿತ್ರಗಳನ್ನು ತೆಗೆದರು ಎಂದರೆ ನಿಜ. ಈಗ ನನಗೆ ತೋರಿಸಿದ **2** ಭಾವಚಿತ್ರಗಳು ಅವೇ ಎಂದರೆ ನಿಜ. ಸದರಿ ಭಾವಚಿತ್ರಗಳಿಗೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ **65** ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇವೆಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಹೇಳಿರುವ ಕಾರಣ ಮತ್ತು ಅದನ್ನು ಆರೋಪಿತನ ಪರ ವಕೀಲರು ಒಪ್ಪಿರುವ ಕಾರಣ ಸದರಿ ಭಾವಚಿತ್ರಗಳನ್ನು ನಿಪಿ–**23** ಮತ್ತು **24** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಎಂ.ಸಿ.ಟಿ. ವಕೀಲರಿಂದ ಆರೋಪಿತನ ಪರವಾಗಿ:**

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ದಿನಾಂಕ 30-05-2024 ರಂದು ಪಿಡಬ್ಲ್ಯೂ-1 ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ.ಸಿ.ಟಿ. ವಕೀಲರಿಂದ ಆರೋಪಿತನ ಪರವಾಗಿ:**

**14**. ನಾನು ಬಿಎ ಪದವಿಧರ ಕಾರಣ ಕನ್ನಡ ಓದಲು ಹಾಗೂ ಬರೆಯಲು ಬರುತ್ತದೆ. ನಮ್ಮ ತಂದೆಯವರಿಗೆ ನಾವು **3** ಜನ ಗಂಡು ಮಕ್ಕಳು. ನಾನು ಕಳೆದ **10–12** ವರ್ಷಗಳಿಂದ

ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. **2019** ರ ಜನವರಿ ತಿಂಗಳ **19** ಅಥವಾ **20** ನೇ ತಾರೀಖಿನಂದು ಚಳ್ಳಕೆರೆ ಸರ್ವೆ ಆಫೀಸಿಗೆ ಅರ್ಜಿಯನ್ನು ನಾನೇ ಸಲ್ಲಿಸಿದ್ದೆ. ಸದರಿ ಅರ್ಜಿಯನ್ನು ನಾನೇ ಬರೆದಿದ್ದೆ ಮತ್ತು ಅದಕ್ಕೆ ನಾನೇ ಸಹಿ ಮಾಡಿದ್ದೆ. ಸದರಿ ಅರ್ಜಿಗೆ ದಾಖಲೆ ಶಿಥಿಲವಾಗಿದೆ ಕಾರಣ ಪ್ರತಿಯನ್ನು ನೀಡಲು ಬರುವುದಿಲ್ಲವೆಂದು ಹಿಂಬರಹ ನೀಡಲಾಯಿತು. ಆಗ ನಾನು ಡಿಡಿಎಲ್‌ಆರ್ ಕಛೇರಿಗೆ ಹೋಗಿ ಅಲ್ಲಿ ಆ ಕುರಿತು ನಿವೇದಿಸಿಕೊಳ್ಳಬೇಕು ಎಂದು ನನಗೆ ಅನ್ನಿಸಲಿಲ್ಲ. ನಾನು ಅರ್ಜಿ ಕೊಟ್ಟ **10–12** ದಿನಗಳ ನಂತರ ನನಗೆ ಹಿಂಬರಹವನ್ನು ನೀಡಲಾಯಿತು. ನಾನು ದುರ್ಗಮ್ಮ ಎಂಬ ಮಹಾದೇವಪುರ ಗ್ರಾಮದ ಗ್ರಾಮ ಲೆಕ್ಕಿಗರನ್ನು ಭೇಟಿಯಾಗಿದ್ದೆ. ನಾನು ಆಕಾರ್ ಬಂದ್ ಗಾಗಿ ಅರ್ಜಿಯನ್ನು ಸಲ್ಲಿಸಿದ್ದೆ. ನಾನು ಖುದ್ದಾಗಿ ಮಹಾದೇವಪುರ ಗ್ರಾಮದ ಸರ್ವೆ ನಂ.**90** ಕ್ಕೆ ಸಂಬಂಧಿಸಿದಂತೆ ಆಕಾರ್ ಬಂದ್ ನೀಡುವಂತೆ ಯಾವುದೇ ಅರ್ಜಿಯನ್ನು ಸಲ್ಲಿಸಿರಲಿಲ್ಲ ಎನ್ನುವುದು ಸರಿಯಲ್ಲ.

**15.** ನಾನು ಅರ್ಜಿಯನ್ನು ಕೊಟ್ಟ ನಂತರ ನನಗೆ **10–15** ಬಾರಿ ಓಡಾಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುಂದೆ ನನಗೆ ಗ್ರಾಮ ಲೆಕ್ಕಿಗರನ್ನು ಭೇಟಿಯಾಗುವಂತೆ ತಿಳಿಸಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ನಾವು ಗ್ರಾಮ ಸಹಾಯಕರಿಗೆ ಹೋಗಿ ಕೇಳಿದಾಗ ಅವರೇ ಆಕಾರ್ ಬಂದ್ ಪುಸ್ತಕವನ್ನು ತಂದುಕೊಟ್ಟರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆಗ ಆರೋಪಿ **500** ರೂಪಾಯಿ ಕೊಟ್ಟರೆ ದಾಖಲೆ ಕೊಡುತ್ತೇನೆ ಎಂದು ಹೇಳಿದ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆ ಹಣವನ್ನು ನಂತರ ಕೊಡುತ್ತೇನೆ ಎಂದು ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆರೋಪಿಗೆ ಫೋನ್ ಮಾಡಿ ಅದನ್ನು ರೆಕಾರ್ಡ್ ಮಾಡಿಕೊಂಡೆ ಮತ್ತು ಪೊಲೀಸರಿಗೆ ತಿಳಿಸಿದಾಗ ಅವರು ನನಗೆ ಜೀಪನ್ನು ಕಳುಹಿಸಿಕೊಟ್ಟರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಂತರ ನಾನು ಲೋಕಾಯುಕ್ತ ಠಾಣೆಗೆ ಹೋಗಿ ದೂರನ್ನು ನೀಡಿದ ಮೇರೆಗೆ ಅವರು ಟೈಪ್ ಮಾಡಿಕೊಟ್ಟರು ಅದಕ್ಕೆ ನಾನು ಸಹಿ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಲೋಕಾಯುಕ್ತ ಕಛೇರಿಯವರು ನನ್ನಿಂದ **500** ರೂಪಾಯಿ ನೋಟನ್ನು ಪಡೆದುಕೊಂಡರು ಮತ್ತು ಅದಕ್ಕೆ ಕೆಮಿಕಲ್ ನ್ನು ಹಾಕಿದರು

ಹಾಗೂ ಆ ಹಣವನ್ನು ನನ್ನ ಜೇಬಿನಲ್ಲಿ ಇಟ್ಟರು ಮತ್ತು ಕೆಮಿಕಲ್ ನ್ನು ಬಾಟಲಿಗೆ ಹಾಕಿ ಸೀಲು ಮಾಡಿದರು ಹಾಗೂ ಬರವಣಿಗೆಯನ್ನು ನಿಪಿ–2 ರಂತೆ ಮಾಡಿ ನನ್ನ ಸಹಿ ಪಡೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲದೇ ನನ್ನಿಂದ ಮೊಬೈಲ್ ಮೆಮೊರಿ ಚಿಪ್ ನ್ನು ತೆಗೆದುಕೊಂಡು ನನ್ನ ಧ್ವನಿಯನ್ನು ಗುರುತಿಸುವಂತೆ ನನಗೆ ಹೇಳಿದ್ದು ನಾನು ನನ್ನ ಧ್ವನಿಯನ್ನು ಗುರುತಿಸಿದೆ ಮತ್ತು ಆ ಕುರಿತು ನಿಪಿ–3 ರಂತೆ ಪ್ರಿಂಟ್ ತೆಗೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**16.** ಲೋಕಾಯುಕ್ತ ಪೊಲೀಸರ ಬಳಿ ಹೋಗುವ ಪೂರ್ವದಲ್ಲಿ ಆರೋಪಿತನ ವಿರುದ್ಧ ಎಡಿಎಲ್ಆರ್ ಗಾಗಲೀ ಅಥವಾ ಡಿಡಿಎಲ್ಆರ್ ಇವರಿಗಾಗಲೀ ದೂರು ಕೊಡಬೇಕು ಎಂದು ನನಗೆ ಅನ್ನಿಸಲಿಲ್ಲ ಮತ್ತು ಆ ಕುರಿತು ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಮುದ್ದೆ ಮಾಲು **1** ಹಾಗೂ **2** ಇವುಗಳನ್ನು ನನಗೆ ನೀಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅದೇ ರೀತಿ ಮುದ್ದೆ ಮಾಲು **3** ರಿಂದ **5** ಇವುಗಳನ್ನು ಕೂಡಾ ಆ ದಿನ ತಯಾರಿಸಲಾಯಿತು ಹಾಗೂ ನನ್ನ ಜೇಬಿನಲ್ಲಿ ಹಣ ಇಟ್ಟ ನಂತರ ನನ್ನ ಕೈಯನ್ನು ದ್ರಾವಣದಲ್ಲಿ ತೊಳೆಸಿದಾಗ ಅದರ ಬಣ್ಣ ಬದಲಾವಣೆಯಾಯಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ನಾನು ಆರೋಪಿತರಿಗೆ ಹಣ ನೀಡಿದ ನಂತರ ನಾನು ತಲೆಯ ಮೇಲೆ ಕೈಯಾಡಿಸಿಕೊಂಡು ಸೂಚನೆ ನೀಡಬೇಕೆಂದು ಎಸಿಬಿ ಪೊಲೀಸರು ನನಗೆ ತಿಳಿಸಿದ್ದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**17.** ಆ ದಿನ ನನ್ನ ಬಳಿ ಇದ್ದಂತಹ ಸೆಲ್ ಫೋನ್ ಯಾವ ಕಂಪನಿಯದ್ದು ಎಂದು ನೆನಪಿಲ್ಲ ಆದರೆ ಏರ್ ಟೆಲ್ ಕಂಪನಿಯ ಸಿಮ್ ಮತ್ತು ಮೊಬೈಲ್ **7899157304** ನಂಬರ್ ಇತ್ತು. ಪೊಲೀಸರಿಗೆ ನಾನು ಅ ನಂಬರಿನ ಸಿಮ್ ಹಾಗೂ ಮೊಬೈಲ್ ಸೆಟ್ ನ್ನು ನೀಡಿದೆ. ಚಳ್ಳಕೆರೆಯಲ್ಲಿ ಎಡಿಎಲ್ಆರ್ ಆಫೀಸ್ ಪಕ್ಕದಲ್ಲೆ ತಾಲ್ಲೂಕು ಕಛೇರಿ ಇದ್ದು ಆ ಎರಡೂ ಕಛೇರಿಗಳಲ್ಲದೇ ಬೇರೆ ಕಛೇರಿಗಳು ಇವೆ ಎನ್ನುವುದು ನಿಜ. ಸದರಿ ಎಡಿಎಲ್ಆರ್ ಕಛೇರಿಯಲ್ಲಿ **15–20** ಜನ ಕೆಲಸ ಮಾಡುತ್ತಾರೆ ಎನ್ನುವುದು ನಿಜ. ಅಲ್ಲದೇ ಯಾವಾಗಲೂ ಸಾರ್ವಜನಿಕರು ಆ ಕಛೇರಿಯಲ್ಲಿ ಬಂದು ಹೋಗುವುದು ಮಾಡುತ್ತಿರುತ್ತಾರೆ ಎನ್ನುವುದು ನಿಜ. ಆ ಕಛೇರಿಯಲ್ಲಿ ಆರೋಪಿತನಿಗೆ ಪ್ರತ್ಯೇಕ ಕೊಠಡಿ ಇರಲಿಲ್ಲ ಎನ್ನುವುದು ನಿಜ. ನಾನು ದೂರನ್ನು ಕೊಟ್ಟಾಗ ಮದ್ಯಾಹ್ನ **3.00** ಗಂಟೆಯಾಗಿತ್ತು. ಪೊಲೀಸರು

ತೆಗೆದುಕೊಂಡ ಕ್ರಮಗಳು ಮುಕ್ತಾಯವಾಗುವಷ್ಟೊತ್ತಿಗೆ ಸಾಯಂಕಾಲ **6.30** ಆಗಿತ್ತು. ನನಗೆ ಗೊತ್ತಿರುವಾ ಹಾಗೆ ಸರ್ಕಾರಿ ಕಛೇರಿಗಳು ಬೆಳಗ್ಗೆ **10.00** ರಿಂದ ಸಾಯಂಕಾಲ **5.30** ಗಂಟೆವರೆಗೆ ಕೆಲಸ ಮಾಡುತ್ತವೆ ಎಂದರೆ ನಿಜ.

**18**. ಚಳ್ಳಕೆರೆ ಟೌನ್ ಚಿತ್ರದುರ್ಗದಿಂದ ಸುಮಾರು **35** ಕೀಮೀ ದೂರವಿದೆ ಎನ್ನುವುದು ನಿಜ. ಮತ್ತು ಇಲ್ಲಿಂದ ಅಲ್ಲಿಗೆ ವಾಹನದಲ್ಲಿ ತಲುಪಬೇಕೆಂದರೆ ಸುಮಾರು **45** ನಿಮಿಷ ಬೇಕು ಎನ್ನುವುದು ನಿಜ. ಆ ದಿನ ನಾವು ಎಸಿಬಿ ಪೊಲೀಸರ ವಾಹನದಲ್ಲಿಯೇ ಚಳ್ಳಕೆರೆಗೆ ತಲುಪಿದೆವು. ಆ ವಾಹನ **5** ಜನ ಕುಳಿತುಕೊಳ್ಳುವಂತಹ ಕಾರು ಇತ್ತು. ಆ ದಿನ ಆ ವಾಹನದಲ್ಲಿ ಪೊಲೀಸರು **4** ಜನ ಇದ್ದರು ಆದರೆ ಅವರ ಹೆಸರುಗಳು ಗೊತ್ತಿಲ್ಲ. ಎಸಿಬಿ ಕಛೇರಿ ಚಿತ್ರದುರ್ಗದಲ್ಲಿ ಎನ್ನುವುದು ನಿಜ. ಆ ದಿನ ಕಛೇರಿಗೆ ಹೋದಾಗ ಆರೋಪಿ ತನ್ನ ಕುರ್ಚಿಯ ಮೇಲೆ ಇರಲಿಲ್ಲ, ನಾನು ಈ ಮೇಲೆ ಹೇಳಿದ ಮೊಬೈಲ್ ಸಂಖ್ಯೆಯಿಂದಲೇ ಆತನಿಗೆ ಫೋನ್ ಮಾಡಿದಾಗ ಬಂದ. ಆತ ತಾಲ್ಲೂಕು ಕಛೇರಿಯ ಕಡೆಯಿಂದ ಆ ದಿನ ಬಂದ. ಸರ್ವೆ ಸೂಪರ್ ವೈಸರ್ ಕಛೇರಿಯ ಮುಂಭಾಗದಿಂದ ನಾನು ಆತನಿಗೆ ಮೊಬೈಲ್ ಮೂಲಕ ಮಾತನಾಡಿದೆನು.

ಈಗ ವಿರಾಮದ ವೇಳೆಯಾಗಿದ್ದರಿಂದ ಪಾಟೀ ಸವಾಲನ್ನು **2** ನೇ ಅವಧಿವರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

<u>**ಪಿಡಬ್ಲ್ಯೂ-1 ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಂದುವರೆದ ಪಾಟೀ ಸವಾಲು: ಶ್ರೀ ಎಂ.ಸಿ.ಟಿ. ವಕೀಲರಿಂದ ಆರೋಪಿತನ ಪರವಾಗಿಃ**</u>

**19**. ಆ ದಿನ ನಾನು ಫೋನ್ ಮಾಡಿದ ನಂತರ ಆರೋಪಿತ ತಾಲ್ಲೂಕು ಕಛೇರಿ

ಒಳಗಿನಿಂದ ಕಛೇರಿಯಲ್ಲಿ ತಾನು ಕುಳಿತುಕೊಳ್ಳುವ ಸ್ಥಳಕ್ಕೆ ಬಂದ. ನಾನು ಫೋನ್ ಮಾಡಿದಂತಹ ಸ್ಥಳ ಕಛೇರಿಯ ಹೊರಗಿನ ವಿಶಾಲವಾದ ಸ್ಥಳ ಎನ್ನುವುದು ನಿಜ. ಸರ್ವೆ ಕಛೇರಿಯ ಉತ್ತರ ಭಾಗದಲ್ಲಿ ಮುಖ್ಯ ದ್ವಾರ ಇದ್ದು ಆ ದ್ವಾರದಿಂದ ಸುಮಾರು **8–10** ಮೀಟರ್ ಗಳ ಅಂತರದಲ್ಲಿ ಎಸಿಬಿಯವರೊಂದಿಗೆ ಬಂದಂತಹ ಕೆಇಬಿ ಹಾಗೂ ಭದ್ರ ಮೇಲ್ದಂಡೆ ಯೋಜನೆ ಇಲಾಖೆಯಿಂದ ಬಂದಂತಹ ಸಿಬ್ಬಂದಿ ನಿಂತುಕೊಂಡಿದ್ದರು. ನಾನು ಆರೋಪಿತನ ಕಛೇರಿಯಲ್ಲಿ ಆ ದಿನ ಒಳಗೆ ಹೋದಾಗ ಆ ಕಛೇರಿಯ ಓರ್ವ ಮಹಿಳಾ ಸಿಬ್ಬಂದಿ ಕೂಡಾ ಇದ್ದರು. ಆ ದಿನ ಆರೋಪಿ ತನ್ನ ಕಛೇರಿಯ ಸೀಟಿನಲ್ಲಿ ಕುಳಿತುಕೊಂಡಿದ್ದ. ಆ ದಿನ ಎಸಿಬಿ ಸಿಬ್ಬಂದಿಗಳ ಪೈಕಿ ಕೆಲವರು ಆರೋಪಿತನನ್ನು ಹಿಡಿದುಕೊಂಡರು, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಆ ದಿನ ಆರೋಪಿತನ ಜೇಬಿನಲ್ಲಿ ಇನ್ನಿತರ ಬೇರೆ ಪೇಪರ್ ಗಳು ಇದ್ದವು. ನೋಟಿನ ಮೇಲೆ ಪೊಲೀಸರು ಏನೆಂದು ಸೀಲ್ ಹಾಕಿದರು ಎಂದು ಹೇಳಲು ಬರುವುದಿಲ್ಲ. ಈಗ ನನಗೆ ಆ ನೋಟಿನ ನಂಬರ್ ನೆನಪಿಲ್ಲ. ಆ ದಿನ ಪೊಲೀಸರು ಆರೋಪಿತನ ಜೇಬಿನಲ್ಲಿದ್ದ ಇನ್ನಿತರ ಪೇಪರ್ ಗಳನ್ನು ವಶಪಡಿಸಿಕೊಂಡರೋ ಅಥವಾ ಇಲ್ಲವೋ ಎಂದು ಗೊತ್ತಿಲ್ಲ. ಆ ದಿನ ಆರೋಪಿ ಧರಿಸಿದ್ದ ಶರ್ಟಿನ ಕಲರ್ ನನಗೆ ನೆನಪಿಲ್ಲ. ಅಲ್ಲದೇ ಪೊಲೀಸರು ಆತನಿಗೆ ಧರಿಸಲು ಕೊಟ್ಟಂತಹ ಇನ್ನೊಂದು ಶರ್ಟಿನ ಕಲರ್ ಕೂಡಾ ನೆನಪಿಲ್ಲ. ಯಾವ ಅಕ್ಷರಗಳನ್ನು ಉಪಯೋಗಿಸಿ ಮುದ್ದೆ ಮಾಲುಗಳ ಮೇಲೆ ಸೀಲು ಮಾಡಲಾಯಿತು ಎಂದು ನನಗೆ ನೆನಪಿಲ್ಲ.

**20**. ಆ ದಿನ ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಮತ್ತು ಆರೋಪಿ ನನಗೆ ದುಡ್ಡನ್ನು ಕೊಡಿ ಎಂದು ಕೇಳಿಯೂ ಇಲ್ಲ ಹಾಗೂ ನಾನು ಆತನಿಗೆ ಅಲ್ಲಿಯೇ ಹಣವನ್ನು ಕೊಟ್ಟಿಲ್ಲ ಎನ್ನುವುದು ಸುಳ್ಳು ಎನ್ನುವುದು ಸರಿಯಲ್ಲ. ಆ ದಿನ ಆರೋಪಿ ತನ್ನ ಶರ್ಟಿನ ಜೇಬಿನಲ್ಲಿ ಹಣವನ್ನು ಇಟ್ಟುಕೊಂಡು ಒಳಗೆ ಹೋದ ಹಾಗೂ ನಾನು ಎಸಿಬಿಯವರಿಗೆ ಸನ್ನೆ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲದೇ ಆಗ ಎಸಿಬಿಯವರು ಬಂದು ಆರೋಪಿಯನ್ನು ಹಿಡಿದು ಹಣ ತೆಗೆಯುವಂತೆ ಹೇಳಿದ್ದರಿಂದ ಆತ **500** ರೂಪಾಯಿ ನೋಟನ್ನು ಹಾಗೂ ತನ್ನ ಜೇಬಿನಲ್ಲಿದ್ದ ವಸ್ತುಗಳನ್ನು ಟೇಬಲ್ ಮೇಲೆ ಇಟ್ಟ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮಹಜರಿನಲ್ಲಿ ನೋಟ್ ನಂಬರನ್ನು ಬರೆದುಕೊಂಡಿದ್ದ ಪಂಚರು ಆ ನಂಬರನ್ನು ನೋಡಿ ಖಚಿತಪಡಿಸಿಕೊಂಡರು

ಮತ್ತು ನೋಟನ್ನು ತೆಗೆದುಕೊಂಡು ಸೀಲು ಮಾಡಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನ ಕೈಯನ್ನು ತೊಳೆಸಿದಾಗ ಕೆಮಿಕಲ್ ನ ಬಣ್ಣ ಬದಲಾಯಿತು ಮತ್ತು ಆತನ ಶರ್ಟನ್ನು ಕೆಮಿಕಲ್ ನಲ್ಲಿ ತೊಳೆದಾಗ ಅದರ ಬಣ್ಣ ಕೂಡಾ ಬದಲಾಯಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಶರ್ಟನ್ನು ಪಂಚನಾಮೆ ಮೂಲಕ ವಶಪಡಿಸಿಕೊಂಡರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಮುಂದೆ ಎಡಿಎಲ್ಆರ್ ರವರು ಬಂದರು, ಅವರ ಸಮಕ್ಷಮ ಧ್ವನಿ ಸುರುಳಿಯನ್ನು ಕೇಳಿಸಲಾಯಿತು ಹಾಗೂ ಅವರು ಆರೋಪಿತನ ಧ್ವನಿಯನ್ನು ಗುರುತಿಸಿದರು ಮತ್ತು ಆಗ ನಿಪಿ–4 ರಂತೆ ಮಹಜರ್ ತಯಾರಿಸಲಾಯಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ನಿಪಿ–4 ರಂತೆ ಮಹಜರ್ ಕ್ರಮವನ್ನು ಜರುಗಿಸಿಲ್ಲ ಮತ್ತು ಎಡಿಎಲ್ಆರ್ ಮತ್ತು ಪಂಚರ ಸಹಿಗಳನ್ನು ಪಡೆದುಕೊಳ್ಳಲಾಗಿಲ್ಲ ಎನ್ನುವುದು ಸರಿಯಲ್ಲ. ಆ ದಿನ ನಿಪಿ–5 ರಂತೆ ಮಹಜರ್ ಕ್ರಮ ಜರುಗಿಸಿ ಪೊಲೀಸರು ಡಿವಿಡಿಯನ್ನು ಪ್ಲೇ ಮಾಡಿದರು ಹಾಗೂ ಅದನ್ನು ಅಮಾನತ್ತುಪಡಿಸಿಕೊಂಡರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಾನು ಗುರುತಿಸಿದಂತಹ ಮುದ್ದೆ ಮಾಲು **10** ನಾನು ನೀಡಿದ್ದೇನೆ ಎಂದು ಹೇಳಲಾದ **500** ರೂಪಾಯಿ ನೋಟು ಅಲ್ಲ ಅದನ್ನು ನಾನು ಮತ್ತು ಎಸಿಬಿ ಪೊಲೀಸರು ಸೇರಿ ಸೃಷ್ಟಿಸಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ.

**21.** ನಾನು ದಿನಾಂಕ **19–10–2023** ಹಾಗೂ **12–12–2023** ರಂದು ಎರಡು ದಿನಗಳಂದು ನನ್ನ ಸಾಕ್ಷ್ಯ ನುಡಿದಿದ್ದೇನೆ ಎನ್ನುವುದು ನಿಜ. ನಾನು ಸಾಕ್ಷ್ಯ ನೀಡುವ ದಿನಗಳಂದು ನನ್ನ ಆರೋಗ್ಯ ಅಂದರೆ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯದಿಂದ ಕೂಡಿತು ಎನ್ನುವುದು ನಿಜ. ಅಲ್ಲದೇ ನನಗೆ ನೆನಪಿನ ಶಕ್ತಿ ಚೆನ್ನಾಗಿದೆ ಎಂದರೆ ತಕ್ಕಮಟ್ಟಿಗೆ ಇದೆ. ಮುಖ್ಯವಾದ ಘಟನೆ ಬಗ್ಗೆ ಚೆನ್ನಾಗಿ ನೆನಪಿರುತ್ತದೆ ಎಂದರೆ ಬಹಳ ದಿನಗಳ ನಂತರ ಸ್ವಲ್ಪ ಸಾಧ್ಯವಾಗಲಿಕ್ಕಿಲ್ಲ. ಚಾಸಾ–3 ರವರು ಬರೆದಂತಹ ಹಾಳೆಯಲ್ಲಿ ನನ್ನ ಸಹಿಯನ್ನೇನು ಪಡೆದುಕೊಳ್ಳಲಾಗಿಲ್ಲ. ಮಾದರಿ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಪ್ರತ್ಯೇಕ ಕಾಲದಲ್ಲಿ ತೆಗೆದು ಅದನ್ನು ಯಾವ ಅಕ್ಷರದಿಂದ ಸೀಲ್ ಮಾಡಲಾಯಿತು ಎಂದು ಹೇಳಲು ಬರುವುದಿಲ್ಲ. ಸದರಿ ಮುದ್ದೆ ಮಾಲು **11** ನ್ನು ಸೃಷ್ಟಿಸಲಾಗಿದ್ದು ಅದನ್ನು ಆ ದಿನ ಅಮಾನತ್ತುಪಡಿಸಿಕೊಳ್ಳಲಾಗಿಲ್ಲ ಎನ್ನುವುದು ಸರಿಯಲ್ಲ. ದಿನಾಂಕ **12–12–2023** ರಂದು ನಡೆದಂತಹ ನನ್ನ ವಿಚಾರಣೆಯಲ್ಲಿ

ನಾನು ವಿಶೇಷ ಸರ್ಕಾರಿ ಅಭಿಯೋಜಕರು ಸೂಚಿಸಿದಂತಹ ಸೂಚನೆಗಳನ್ನು ಸುಮ್ಮನೆ ಒಪ್ಪಿಕೊಂಡಿದ್ದು ಆ ರೀತಿ ಯಾವುದೇ ಕ್ರಮಗಳನ್ನು ಜರುಗಿಸಲಾಗಿಲ್ಲ ಎನ್ನುವುದು ಸರಿಯಲ್ಲ. ಅಲ್ಲದೇ ನನ್ನ ವಿಚಾರಣೆಯ **9** ನೇ ಕಂಡಿಕೆಯಲ್ಲಿ ಅಭಿಯೋಜಕರು ಸೂಚಿಸಿದ ಸೂಚನೆಗಳಿಗೆ ಸುಮ್ಮನೆ ಒಪ್ಪಿಕೊಂಡಿದ್ದು ಆ ರೀತಿ ಯಾವುದೇ ಕ್ರಮಗಳನ್ನು ಆ ದಿನ ಜರುಗಿಸಲಾಗಿಲ್ಲ ಎನ್ನುವುದು ಸರಿಯಲ್ಲ. ನಿಪಿ**–6** ರಿಂದ **12** ಇವುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ಅದೇ ರೀತಿ ಎಸಿಬಿ ಕಛೇರಿಯಿಂದ ಆರೋಪಿತನ ಕಛೇರಿಗೆ ಹೋಗುವ ಮೊದಲು ಅಧಿಕಾರಿಗಳು ನನಗೆ ಒಂದು ವಾಯ್ಸ್ ರೆಕಾರ್ಡರನ್ನು ಕೊಟ್ಟು ಆರೋಪಿತನೇನಾದರೂ ಲಂಚದ ಹಣದ ಬೇಡಿಕೆ ಇಟ್ಟರೆ ಅದನ್ನು ರೆಕಾರ್ಡ್ ಮಾಡಿಕೊಳ್ಳಬೇಕೆಂದು ನನಗೆ ಸೂಚಿಸಿದ್ದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲದೇ ಮಾದರಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಬಾಟಲಿಗೆ ಹಾಕಿ ಅದನ್ನು ಮೊಹರು ಮಾಡಿದರೆಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಮುದ್ದೆ ಮಾಲು **13** ನ್ನೂ ಕೂಡಾ ಈ ಕೇಸಿಗೋಸ್ಕರ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ.

**22.** ಆ ದಿನ ಎಸಿಬಿ ಕಛೇರಿಗೆ ಬಂದ ನಂತರ ವಾಯ್ಸ್ ರೆಕಾರ್ಡರ್ ಮೂಲಕ ರೆಕಾರ್ಡ್ ಮಾಡಿಕೊಂಡಿದ್ದ ವಿಷಯವನ್ನು ಲ್ಯಾಪ್‌ಟಾಪಿಗೆ ಡೌನ್‌ಲೋಡ್ ಮಾಡಿ ಅದನ್ನು ಕೇಳಿಸಿ ಸದರಿ ಸಿಡಿಯನ್ನು ಮೊಹರು ಮಾಡಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನ ಬಳಿ ಇದ್ದ ನನ್ನ ಅರ್ಜಿಗೆ ಸಂಬಂಧಿಸಿದ ಕಡತದ ದೃಢೀಕೃತ ಪ್ರತಿಯನ್ನು ಚಾಸಾ**–4** ರವರಿಂದ ಮಾಡಿಸಿ ಪೊಲೀಸರು ಪಡೆದುಕೊಂಡರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ**–15** ರಿಂದ **21** ಇವುಗಳನ್ನು ಈ ಕೇಸಿಗೊಸ್ಕರ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ಆರೋಪಿತನ ಜೊತೆ ಸಂಭಾಷಣೆ ನಡೆಸಿದಂತಹ ಕಾಲದಲ್ಲಿ ನನ್ನ ಧ್ವನಿ ಇದ್ದ ಅಂಶಗಳನ್ನು ಪ್ರತ್ಯೇಕಿಸಿ ಅದರ ಲೇಖಿ ಪ್ರತಿಯನ್ನು ತೆಗೆದರು ಮತ್ತು ಅದರ ಪ್ರತಿಯನ್ನು ನನಗೆ ಕೊಟ್ಟು ಎರಡು ಬಾರಿ ನನ್ನ ಬಳಿ ಅದರಲ್ಲಿರುವ ಅಂಶಗಳನ್ನು ಹೇಳಿಸಿದರು ಮತ್ತು ಅದನ್ನು ರೇಕಾರ್ಡ್ ಮಾಡಿದರು ಹಾಗೂ ಅದು ನಿಪಿ**–22** ಇರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಾನು ಅಭಿಯೋಜನೆಯ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಂತಹ ಯಾವುದೇ ವಿಷಯ ಆ ಮೊದಲು ಗೊತ್ತಿರಲಿಲ್ಲ

ಕೇವಲ ಅವರು ಕೇಳಿದ ಮಾತ್ರಕ್ಕೆ ನಾನು ಹೌದು ಎಂದು ಹೇಳುತ್ತಾ ಹೋಗಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ನಾನು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**23**. ನಾನು ಸರ್ವೆ ನಂ.**90** ಕ್ಕೆ ಸಂಬಂಧಿಸಿದಂತಹ ಆಕಾರ್ ಬಂದ್ ಸಲುವಾಗಿ ನನ್ನ ಹೆಸರಿನಲ್ಲಿ ಅರ್ಜಿಯನ್ನು ಕೊಟ್ಟಿಲ್ಲ ಹಾಗೂ ನಾನು ಅರ್ಜಿದಾರನೂ ಅಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರನಿರದೇ ಇರುವ ಕಾರಣ ಆರೋಪಿತನಿಗೂ ಮತ್ತು ನನಗೂ ಯಾವುದೇ ಸಂಪರ್ಕ ಬಂದಿಲ್ಲ ಹಾಗೂ ಆತ ನನಗೆ ಹಣ ಕೊಡುವಂತೆಯೂ ಕೇಳಿಲ್ಲ ಎನ್ನುವುದು ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸನ್ನಿವೇಶ ಜರುಗಿಲ್ಲ ಆದಾಗ್ಯೂ ಕೂಡಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಸರ್ವೆ ನಂ.**90** ಕ್ಕೆ ಸಂಬಂಧಿಸಿದಂತೆ ಹಿಂಬರಹವನ್ನು ನೀಡಿದ ನಂತರ ಡಿಡಿಎಲ್‌ಆರ್ ರವರಿಗೆ ಅರ್ಜಿಯನ್ನು ಸಲ್ಲಿಸದೇ ಆರೋಪಿತನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಮೂಲ ಆಕಾರ್ ಬಂದ್ ಶಿಥಿಲಗೊಂಡಿದ್ದರಿಂದ ಹಾಗೂ ನನಗೆ ಸರ್ವೆ ನಂ.**90** ರ ಆಕಾರ್ ಬಂದ್ ಸಿಗದೇ ಇದ್ದುದ್ದರಿಂದ ತಪ್ಪು ಕಲ್ಪನೆಯಿಂದ ದೂರು ಕೊಟ್ಟೆ ಎನ್ನುವುದು ಸರಿಯಲ್ಲ. ಡಿಡಿಎಲ್‌ಆರ್ ರವರಿಗೆ ಮೇಲ್ಮನವಿ ಸಲ್ಲಿಸಿದರೆ ಲೇಟ್ ಆಗುತ್ತದೆ ಎಂದು ಆರೋಪಿತನ ವಿರುದ್ಧ ದೂರು ಕೊಟ್ಟರೆ ದಾಖಲೆ ಬೇಗ ಸಿಗುತ್ತದೆ ಎಂಬ ತಪ್ಪು ಕಲ್ಪನೆಯಿಂದ ದೂರು ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿತನನ್ನು ಸಿಕ್ಕಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನೀಡಿದ್ದೇನೆ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.